<u>ದಿನಾಂಕ:**23-09-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಪ್ರತಿವಾದಿ ನಂ.7 ರವರ ಪರ: ಶ್ರೀ. ಎನ್.ಎನ್.ಎಸ್. ವಕೀಲರಿಂದ:</u>

ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಮದುವೆಯಾಗಿ 30 ವರ್ಷಗಳು ಆದವು. ನನ್ನ ತಂದೆಗೆ ನಾವು ಮೂರು ಜನ ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು. ನನ್ನ ತಂದೆಯ ಮೂರು ಹೆಣ್ಣು ಮಕ್ಕಳಿಗೆ ಮದುಗೆಯಾಗಿದೆ. ನಾವು ಮದುವೆಯಾದಾಗಿನಿಂದ ನಮ್ಮ ನಮ್ಮ ಗಂಡನ ಮನೆಗಳಲ್ಲಿ ಇರುತ್ತೇವೆ

ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ತೀರಿಕೊಂಡ ದಿನಾಂಕ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅಂದಾಜು 2012 ರಲ್ಲಿ ತನ್ನ ತಂದೆ ಹಾಗೂ 2020 ರಲ್ಲಿ ತನ್ನ ತಾಯಿ ತೀರಿಕೊಂಡಿದ್ದಾರೆ ಎನ್ನುತ್ತಾರೆ.

ನನ್ನ ತಂದೆಗೆ ಒಟ್ಟು 20 ಎಕರೆ ಜಮೀನು ಇರುತ್ತದೆ . ಅವುಗಳ ಸರ್ವೆ ನಂಬರ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಸರ್ವೆ ನಂ.169/5 ರ ಜಮೀನು 07-ಎಕರೆ 13-ಗುಂಟೆ ಜಮೀನು ತನ್ನ ತಂದೆಯ ಜಮೀನು ಎನ್ನುತ್ತಾರೆ. ಬೇರೆ ಸರ್ವೆ ನಂಬರ ಗೊತ್ತಿಲ್ಲ. ಸದರಿ 07-ಎಕರೆ 13-ಗುಂಟೆ ಜಮೀನು ಜಗಳದ ಜಮೀನು ಆಗಿರುವದರಿಂದ ಅದನ್ನು ಮಾತ್ರ ನೆನಪು ಇಟ್ಟುಕೊಂಡಿದ್ದಿರಿ ಎಂದರೆ ಸಾಕ್ಷಿಯು ಸದರಿ ಜಮೀನು ತನ್ನ ಅಜ್ಜನ ಜಮೀನು ಎನ್ನುತ್ತಾರೆ.

ದಾವಾ ಆಸ್ತಿಯ ಕುರಿತು ಪಹಣಿ ನಕಲುಗಳನ್ನು ಹಾಜರಪಡಿಸಿದ್ದೇನೆ ಎಂದರೆ ಸರಿ. ಉಷಾ ಗಂ. ರಮೇಶ ರವರು ನನ್ನ ಅತ್ತಿಗೆ. ದಾವೆ ಸಲ್ಲಿಸುವ ಸಮಯದಲ್ಲಿ ಉಷಾ ರವರ ಹೆಸರಲ್ಲಿ ಸರ್ವೆ ನಂ.30/3 ರ 01-ಎಕರೆ 34-ಗುಂಟೆ ಜಮೀನು ಇತ್ತು ಎನ್ನುವದು ಗೊತ್ತಿಲ್ಲ. ಉಷಾ ರವರ ಹೆಸರಿನಲ್ಲಿ ಸದರಿ ಜಮೀನು ಇದ್ದರೂ ಸಹ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರನ್ನು ಈ ದಾವೆಯಲ್ಲಿ ಏಕೆ ಪಾರ್ಟಿ ಮಾಡಬೇಕು ಎಂದು ಕೇಳುತ್ತಾರೆ. ಸದರಿ ಸರ್ವೆ ನಂ.30/3 ರಲ್ಲಿ ಶೀಲಾ ಗಂ.ಶೀಕಾಂತ ಭೂರಾಳೆ ರವರ ಜಮೀನು ಸಹ ಇದೆ ಎಂದರೆ ಸರಿಯಲ್ಲ.

1982 ರಲ್ಲಿ ನನ್ನ ತಂದೆ ಹಾಗೂ ನನ್ನ ಸಹೋದರರು ಸರ್ವೆ ನಂ.169/5 ರಲ್ಲಿಯ 07-ಎಕರೆ 13-ಗುಂಟೆ ಜಮೀನನ್ನು ಮೃತ 7 ನೇ ಪ್ರತಿವಾದಿಗೆ ಮಾರಾಟ ಮಾಡಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ

ಎನ್ನುವದು ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಆ ರೀತಿ ಯಾವುದೇ ಹೊಲ ಮಾರಾಟ ಮಾಡಿಲ್ಲ ಎನ್ನುತ್ತಾರೆ ಹಾಗೂ 1982 ಕ್ಕಿಂತ ಪೂರ್ವದಿಂದ ಮತ್ತು ಇಲ್ಲಿಯವರೆಗೆ ತಾನೇ ಕಬ್ಜೆಯಲ್ಲಿ ಇರುತ್ತೇನೆ ಎನ್ನುತ್ತಾರೆ.

ನನ್ನ ತಂದೆ ಮತ್ತು ಮೃತ 7 ನೇ ಪ್ರತಿವಾದಿಯ ನಡುವೆ ನ್ಯಾಯಾಲಯದಲ್ಲಿ ಪ್ರಕರಣಗಳು ಇರುತ್ತವೇಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ಸರ್ವೆ ನಂ.169/5 ರ 07-ಎಕರೆ 13-ಗುಂಟೆ ಜಮೀನು ಅಂದರೆ ದಾವಾ ಶೆಡೂಲ-ಎ(3) ರ ಜಮೀನು ಯಾರ ಹೆಸರಲ್ಲಿ ಇತ್ತು ಎನ್ನುವದು ಗೊತ್ತಿಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ದಾವಾ ಶೆಡೂಲ-ಎ(3) ರ ಪಹಣಿ ಪತ್ರಿಕೆ ಯಾರ ಹೆಸರಲ್ಲಿ ಇತ್ತು ಎನ್ನುವದು ಗೊತ್ತಿಲ್ಲ. ಅದೇ ರೀತಿ ದಾವಾ ಶೆಡೂಲ-ಎ(1) ಮತ್ತು (2) ರ ಜಮೀನುಗಳ ಪಹಣಿ ಪತ್ರಿಕೆ ಯಾರ ಹೆಸರಲ್ಲಿ ಇದ್ದವೂ ಎನ್ನುವದು ಗೊತ್ತಿಲ್ಲ.

ಮೃತ 7 ನೇ ಪ್ರತಿವಾದಿಗೆ ಎಷ್ಟು ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಎನ್ನುವದು ಗೊತ್ತಿಲ್ಲ. ಅವರ ವಿರುದ್ಧ ನಾನು ಯಾವುದೇ ಕೇಸ ಹಾಕಿಲ್ಲ. ನಿಮ್ಮ ತಂದೆ ಕೋರ್ಟು ಕಛೇರಿಗಳಿಗೆ ಅಲೆದಾಡುವದು ಗೊತ್ತೆ ಎಂದರೆ ಸಾಕ್ಷಿಯು ಮೃತ 7 ನೇ ಪ್ರತಿವಾದಿ ಬಡ್ಡಿ ವ್ಯವಹಾರ ಮಾಡುತಿದ್ದು ತನ್ನ ತಂದೆಗೆ ಮೋಸ ಮಾಡಿ 7 ನೇ ಪ್ರತಿವಾದಿ ಹೊಲ ಪಡೆದುಕೊಂಡಿದ್ದಾನೆ ಎನ್ನುತ್ತಾರೆ. ಮೃತ 7 ನೇ ಪ್ರತಿವಾದಿಗೆ ನನ್ನ ತಂದೆ ನೋಂದಾಯಿತ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂಬ ವಿಷಯವನ್ನು ನಾನು ಕೇಳಿಲ್ಲ ಸದರಿ ಖರೀದಿ ಪತ್ರ ಕ್ಕೆ ನನ್ನ ಅಣ್ಣ ತಮ್ಮಂದಿರಾದ ಇಂದರರಾಜ ಹಾಗೂ ಬಸವರಾಜ ರವರೂ ಸಹ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ಮದುವೆ ಆದ ನಂತರ ನಾನು ನನ್ನ ಗಂಡನ ಮನೆಯಿಂದ ತವರು ಮನೆಗೆ ನನ್ನ ತವರು ಮನೆಯವರನ್ನು ನೋಡಲು ಆಗಾಗ

ಬರುತ್ತೀರುತ್ತೇನೆ. ಆಗ ನನ್ನ ತಂದೆ ಮತ್ತು ಸಹೋದರರು ದಾವಾ ಶಡೂಲ-ಎ(3) ರ ಜಮೀನನ್ನು ಮೃತ 7 ನೇ ಪ್ರತಿವಾದಿಗೆ ಖರೀದಿ ಪತ್ರ ಮಾಡಿಕೊಟ್ಟ ಬಗ್ಗೆ ಮಾತನಾಡುವದನ್ನು ಕೇಳಿಲ್ಲ. ಮೃತ 7 ನೇ ಪ್ರತಿವಾದಿಗೆ ನನ್ನ ತಂದೆ ಮತ್ತು ನನ್ನ ಸಹೋದರರು ದಾವಾ ಶಡೂಲ-ಎ(3) ರ ಜಮೀನನ್ನು ಮಾರಾಟ ಮಾಡಿದ್ದರ ಕುರಿತು 1 ವರ್ಷದ ಹಿಂದೆ ನನಗೆ ಗೊತ್ತಾಯಿತು. ನನ್ನ ಮದುವೆ ಆದಾಗಿನಿಂದಲೂ ಸದರಿ ವಿಷಯ ಗೊತ್ತಿದ್ದರೂ ಸಹ ಒಂದು ವರ್ಷದ ಹಿಂದೆ ಗೊತ್ತಾಯಿತು ಎಂದು ಹೇಳುವದು ಸುಳ್ಳು ಎಂದರೆ ಸರಿಯಲ್ಲ.

ನನ್ನ ತಂದೆ ಹಾಗೂ ಸಹೋದರರು ಮೇಲೆ ಹೇಳಿದ ಖರೀದಿ ಪತ್ರ ರದ್ದಾಗಬೇಕೆಂದು ಮೃತ 7 ನೇ ಪ್ರತಿವಾದಿಯ ವಿರುದ್ಧ ಅಸಲು ದಾವಾ ಸಂ.90/1988 ನ್ನು ಸಲ್ಲಿಸಿರುವದು ನನಗೆ ಗೊತ್ತಿಲ್ಲ. ಸದರಿ ದಾವೆಯು ಸಲ್ಲಿಸಿರುವ ವಿಚಾರ ಮತ್ತು ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ಸಹೋದರರ ವಿರುದ್ಧ ತೀರ್ಪು ಆದ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಮೃತ 7 ನೇ ಪ್ರತಿವಾದಿಯೇ ಈ ದಾವೆಯ ದಾವಾ ಶಡೂಲ-ಎ(3) ರ ಮಾಲೀಕ ಎಂದು ತೀರ್ಮಾನ ಆಗಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಅದೇ ರೀತಿ ಈ ದಾವೆಯ ಮೃತ 7 ನೇ ಪ್ರತಿವಾದಿ ಈ ದಾವೆಯ ದಾವಾ ಶಡೂಲ-ಎ(3) ರ ಆಸ್ತಿಯ ಮಾಲೀಕ ಎಂದು ಘೋಷಣೆ ಮಾಡಲು ನನ್ನ ತಂದೆ ಮತ್ತು ಸಹೋದರರ ವಿರುದ್ಧ ಅಸಲು ದಾವಾ ಸಂ.230/1993 ನ್ನು ಸಲ್ಲಿಸಿರುವ ವಿಚಾರ ನನಗೆ ಗೊತ್ತಿದ್ದರೂ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂ.230/1993 ರಲ್ಲಿ ಈ ದಾವೆಯ ಮೃತ 7 ನೇ ಪ್ರತಿವಾದಿಯ ವಿರುದ್ಧ ತೀರ್ಪು ಆಯಿತು ಮತ್ತು ಆ ಕುರಿತು ನನ್ನ ತಂದೆ ಖುಷಿಯಿಂದ ನಮಗೆಲ್ಲ ಸಿಹಿ ಹಂಚಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಸದರಿ

ತೀರ್ಪಿನ ವಿರುದ್ಧ ಈ ದಾವೆಯ ಮೃತ 7 ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದನು ಮತ್ತು ಸದರಿ ಮೇಲ್ಮನವಿಯಲ್ಲಿ ಅಂದರೆ ಆರ್.ಎ.ನಂ.41/2007 ರಲ್ಲಿ ಮೃತ 7 ನೇ ಪ್ರತಿವಾದಿಯ ಪರವಾಗಿ ತೀರ್ಪು ಆಗಿ ಈ ದಾವೆಯ ದಾವಾ ಶಡೂಲ-ಎ(3) ಗೆ ಮೃತ 7 ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜೆದಾರ ಎಂದು ತಿರ್ಮಾನ ಆಯಿತು ಎನ್ನುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ.

ಅದೇ ರೀತಿ ನನ್ನ ತಂದೆ ಮತ್ತು ನನ್ನ ಸಹೋದರರು ಸಲ್ಲಿಸಿದ ಅಸಲು ದಾವಾ ಸಂ.90/1998 ರ ತೀರ್ಪಿನ ವಿರುದ್ಧ ನನ್ನ ತಂದೆ ಮತ್ತು ಸಹೋದರರು ಆರ್.ಎ. ನಂ15/2000 ನ್ನು ಸಲ್ಲಿಸಿದ್ದರು ಮತ್ತು ಸದರಿ ಮೇಲ್ಮನವಿ ವಜಾಗೊಂಡಿತ್ತು ಎಂಬ ವಿಚಾರವೂ ಸಹ ನನಗೆ ಗೊತ್ತು ಎಂದರೆ ಸರಿಯಲ್ಲ.

ಮೇಲೆ ಹೇಳಿದ ಎಲ್ಲಾ ತೀರ್ಪುಗಳಲ್ಲಿಯೂ ಸಹ ಈ ದಾವೆಯ ಮೃತ 7 ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜೆದಾರ ಎಂದು ಘೋಷಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಮೃತ 7 ನೇ ಪ್ರತಿವಾದಿಯ ಹೆಸರಿಗೆ ಆದ ಖರೀದಿ ಪತ್ರದ ಆಧಾರದ ಮೇಲೆ ಆತನ ಹೆಸರು ದಾವಾ ಶಡೂಲ-ಎ(3) ರ ಆಸ್ತಿಗೆ ದಾಖಲಾದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎನ್ನುತ್ತಾರೆ.

ನನ್ನ ವಾದಪತ್ರದಲ್ಲಿ ನನ್ನ ತಂದೆ ಮತ್ತು ಸಹೋದರರು ಮತ್ತು ಮೃತ 7 ನೇ ಪ್ರತಿವಾದಿಯ ನಡುವೆ ಇದ್ದ ಪ್ರಕರಣಗಳ ಕುರಿತು ನಮೂದಿಸಿಲ್ಲ ಮತ್ತು ಸದರಿ ತೀರ್ಪುಗಳ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಹ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಶಡೂಲ-ಎ(3) ರಲ್ಲಿ ಕೆನಾಲ ಹೋಗಿರುವದು ಗೊತ್ತೆ ಎಂದರೆ ಮೊದಲಿನಿಂದಲು ಕೆನಾಲ ಸದರಿ ಜಮೀನಿನಲ್ಲಿ ಇದೆ ಎನ್ನುತ್ತಾರೆ. ಸದರಿ ಕೆನಾಲಿನ ಭೂ ಸ್ವಾಧೀನದ ಪರಿಹಾರಧನ ಮೃತ 7 ನೇ ಪ್ರತಿವಾದಿಗೆ ಸಿಕ್ಕಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ.

ನಾನು ದಾವೆ ಸಲ್ಲಿಸುವ ಸಮಯದಲ್ಲಿ ಮೃತ 7 ನೇ ಪ್ರತಿವಾದಿಯ ಹೆಸರಿಗೆ ದಾವಾ ಶಡೂಲ-ಎ(3) ರ ಆಸ್ತಿಯ ಖರೀದಿ ಪತ್ರ ಆಗಿ ಸುಮಾರು 32 ವರ್ಷಗಳು ಆಗಿದ್ದವು ಎನ್ನುವದು ಗೊತ್ತಿಲ್ಲ. ಸದರಿ ವಿಚಾರವು ನಮಗೆಲ್ಲ ಗೊತ್ತಿದ್ದರೂ ಸಹ ನನ್ನ ಸಹೋದರರಾದ ಇಂದರರಾಜ ಮತ್ತು ಬಸವರಾಜ ರವರು ನನ್ನನ್ನು ಮುಂದು ಮಾಡಿ ಮೃತ 7 ನೇ ಪ್ರತಿವಾದಿ ಮತ್ತು ಆತನ ಕುಟುಂಬದವರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಶಡೂಲ-ಎ(3) ರ ಆಸ್ತಿಗೆ ಖರೀದಿ ಪತ್ರದ ದಿನಾಂಕದಿಂದ ಮೃತ 7 ನೇ ಪ್ರತಿವಾದಿ ತೀರಿಕೊಳ್ಳುವವರೆಗೆ ಆತನೆ ಮಾಲೀಕ ಮತ್ತು ಕಬ್ಜೆದಾರ ಆಗಿದ್ದನು ಹಾಗೂ ಆತನ ಮರಣದ ನಂತರ ಆತನ ಹೆಂಡತಿ ಮತ್ತು ಮಕ್ಕಳು ಸದರಿ ಆಸ್ತಿಯ ಮಾಲೀಕ ಮತ್ತು ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶಡೂಲ-ಎ(3) ರಲ್ಲಿ ನಾನು ಕಬ್ಜೆ ಹೊಂದಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರಪಡಿಸಿದ್ದೇನೆ. ಆ ರೀತಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎಲ್ಲಾ ನ್ಯಾಯಾಲಯದ ವ್ಯಾಜ್ಯಗಳಲ್ಲಿ ದಾವಾ ಶಡೂಲ-ಎ(3) ರ ಮಾಲೀಕ ಮೃತ 7 ನೇ ಪ್ರತಿವಾದಿ ಆಗಿರುತ್ತಾನೆ ಎಂದು ತೀರ್ಪು ಆಗಿರುವದರಿಂದ ಸದರಿ ಜಮೀನಿನಲ್ಲಿ ನಮಗೆ ಯಾವುದೇ ರೀತಿಯ ಹಕ್ಕು ಸ್ವಾಧೀನ, ವೈವಾಟು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುದುವರಿದು ಸದರಿ ಜಮೀನು ತನ್ನ ಪಿತ್ರಾರ್ಜಿತ ಆಸ್ತಿ ಇದ್ದು ಅದರಲ್ಲಿ ತನಗೆ ಪಾಲು ಬರಲೇ ಬೇಕು ಎನ್ನುತ್ತಾರೆ.

(ಪಾಟೀ ಸವಾಲುಃ **1** ರಿಂದ **6** ನೇ ಪ್ರತಿವಾದಿಗಳ ಪರ ಶ್ರೀ.ಜಿ.ಎನ್.ಸಿ. ವಕೀಲರು ಪಾಟೀ ಸವಾಲು ಇಲ್ಲ ಎನ್ನುತ್ತಾರೆ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ

ಸಿವಿಲ್ ಮತ್ತು ಜೆ.ಎಮ್.ಎಫ.ಸಿ ನ್ಯಾಯಾಧೀಶರು
ಭಾಲ್ಕಿ